**<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ</u>**

**<u>ವಿಶೇಷ ಮೊಕದ್ದಮೆ ಸಂಖ್ಯೆಃ- 997/2021</u>**

**ಪ್ರಾಸಾಃ- 2 ಚಾಸಾಃ-4**

| | | |
|---|---|---|
| ಸಾಕ್ಷಿಯ ಹೆಸರು | : | ಸುಮಂಗಳಮ್ಮ |
| ಗಂಡನ ಹೆಸರು | : | ವೀರೇಶ್ |
| ವಯಸ್ಸು | : | 27 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಊಳೂರು |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 19.7.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ಚಾಸಾ 1 ನನ್ನ ಗಂಡ. ಚಾಸಾ 5 ರಿಂದ 9 ರವರ ಪರಿಚಯ ಇಲ್ಲ. ಆರೋಪಿತರ ಪರಿಚಯ ಇದೆ. ನಾವು ಮಾದಿಗರ ಜನಾಂಗಕ್ಕೆ ಸೇರಿದ್ದೇವೆ. ಆರೋಪಿ 1 ರಿಂದ 4 ರವರು ಅಗಸರ ಜನಾಂಗಕ್ಕೆ ಸೇರಿದ್ದಾರೆ. ಆರೋಪಿ 5 ರಿಂದ 9 ರವರು ನಮ್ಮ ಜನಾಂಗಕ್ಕೆ ಸೇರಿದ್ದಾರೆ. ನಮಗೆ ಸೇರಿದ ಒಂದು ಎಕರೆ ಜಮೀನು ಊಳೂರು ಗ್ರಾಮದಲ್ಲಿದೆ. ನಾನು, ನನ್ನ ಗಂಡ ಮತ್ತು ಮಕ್ಕಳು ಈಗ ಸುಮಾರು 3 ವರ್ಷದ ಹಿಂದೆ ಮುಂಜಾನೆ 7-00 ಗಂಟೆಗೆ ನಮ್ಮ ಹೊಲಕ್ಕೆ ಕೆಲಸಕ್ಕೆ ಹೋಗಿದ್ದೆವು. ಸ್ವಲ್ಪ ಹೊತ್ತಿನ ನಂತರ ಆರೋಪಿತರು ಎಲ್ಲರೂ ನಮ್ಮ ಹೊಲಕ್ಕೆ ಬಂದರು. 1 ನೇ ಆರೋಪಿಯು ಚಾಸಾ 1 ಈತನಿಗೆ ಮಾದಿಗರ ಸೂಳೆ ಮಗನೇ ತಹಸೀಲ್ದಾರ್ ಬಳಿ ಇರುವ ಕೇಸನ್ನು ವಾಪಾಸ್ಸು ತೆಗೆದುಕೋ ಇಲ್ಲದಿದ್ದರೆ ಸಾಯಿಸಿ ಬಿಡುವುದಾಗಿ ಎಂದು ಬೆದರಿಸಿದ್ದನು. ಆರೋಪಿ 1 ಮತ್ತು 2 ರವರು ನನ್ನ ಗಂಡನ ಕೈಯನ್ನು ಹಿಡಿದುಕೊಂಡಿದ್ದರು. 1 ನೇ ಆರೋಪಿಯು ನಾವು ಹೊಡೆದರೆ ಕೇಸು ಆಗುತ್ತದೆ ಎಂದು ಆರೋಪಿ 5 ಮತ್ತು 6 ರವರಿಗೆ ಹೇಳಿದ್ದ. 1 ಮತ್ತು 2 ನೇ ಆರೋಪಿತರು ಚಾಸಾ 1 ಈತನ ಕೈಯನ್ನು ಹಿಡಿದುಕೊಂಡಿದ್ದರು ಮತ್ತು 5 ನೇ ಆರೋಪಿಯು ಕೊಡಲಿಯಿಂದ ಚಾಸಾ 1 ಈತನ ತಲೆಯ ಮಧ್ಯ ಭಾಗಕ್ಕೆ ಕಡಿದು ಹಾಕೋಣ ಎಂದು ಹೇಳಿ ಹೊಡೆದ. ನಂತರ ಕೊಡಲಿಯನ್ನು ತಿರುಗಿಸಿ ಬಲಗೈಗೆ ಅಥವಾ ಎಡಗೈಗೋ ಹೊಡೆದಿದ್ದ.

ಆರೋಪಿ 7 ಮತ್ತು 8 ರವರು ಕುಡುಗೋಲಿನಿಂದ ನನ್ನ ತಲೆಗೆ ಹೊಡೆದರು. ಆರೋಪಿ 4 ಉಳಿದ ಆರೋಪಿತರಿಗೆ ಮಾದಿಗ ಸೂಳೆ ಮಗನನ್ನು ಹೊಡೆದು ಹಾಕಿ ಎಂದು ಹೇಳುತ್ತಿದ್ದಳು. 9 ನೇ ಆರೋಪಿಯು ನನ್ನ ಮಕ್ಕಳಾದ ಲಕ್ಷ್ಮಿ ಮತ್ತು ಶಂಕರ್ ರವರಿಗೆ ಕಲ್ಲಿನಿಂದ ಗುದ್ದಿದ್ದಳು. ಘಟನೆಯಲ್ಲಿ ನಾವು ಗಾಯಗೊಂಡು ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ಚಿಕಿತ್ಸೆಗೆ ಹೋದೆವು. ಈ ಎಲ್ಲಾ ಸಂಗತಿಗಳ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿದ್ದೇನೆ. ಘಟನೆಯ ನಂತರ ಪೋಲೀಸರು ನಮ್ಮ ಊರಿಗೆ ಬಂದಿದ್ದರು. ನಿಪಿ-4 ಮತ್ತು 5 ಪೋಟೋದಲ್ಲಿ ಘಟನೆಯ ಜಾಗ ಕಾಣುತ್ತಿದೆ. ಆರೋಪಿತರು ನಮಗೆ ಹಲ್ಲೆ ಮಾಡಲು ಉಪಯೋಗಿಸಿದ ಕೊಡಲಿ, ಕುಡುಗೋಲು ಮತ್ತು ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮು ಮಾ 1 ರಿಂದ 3 ಎಂದು ಗುರುತಿಸಲಾಗಿದೆ. ಘಟನೆಯ ಸಮಯದಲ್ಲಿ ಚಾಸಾ 1 ತೊಟ್ಟಿದ್ದ ಬಟ್ಟೆಯನ್ನು ನೋಡಿದರೆ ಗುರುತಿಸುತ್ತೇನೆ. ಮು ಮಾ 4 ಮತ್ತು 5 ಚಾಸಾ 1 ರವರ ಅಂಗಿ ಮತ್ತು ಲುಂಗಿ ಆಗಿವೆ. ಸಾಕ್ಷಿಯು ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಆರ್ ಎಸ್ ವಕೀಲರಿಂದಃ</u>

ನಾವು ಊಳೂರಿನಲ್ಲಿ ವಾಸ ಇದ್ದೇವೆ. ಆರೋಪಿತರು ವಾಸ ಇರುವ ಸ್ಥಳ ಬೇರೆಯಾಗಿದೆ ಎಂದರೆ ಸರಿಯಲ್ಲ. ಆರೋಪಿ 1 ರಿಂದ 4 ರವರು ಮತ್ತು ಚಾಸಾ 1 ರವರ ನಡುವೆ ಆಸ್ತಿಯ ಬಗ್ಗೆ ಸಿವಿಲ್ ವ್ಯಾಜ್ಯ ನಡೆಯುತ್ತಿದೆ ಎಂದರೆ ಸರಿ. ಊಳೂರಿನಲ್ಲಿ ನಮ್ಮದು ನೀರಾವರಿ ಜಮೀನು ಇದೆ. 8 ನೇ ತಿಂಗಳಿನಲ್ಲಿ ಮೆಣಸಿನಕಾಯಿ ನಾಟಿ ಮಾಡುವುದು, ಭತ್ತ ನಾಟಿ ಮಾಡುವುದು ಮುಂತಾದ ಕೆಲಸಗಳು ಇರುತ್ತವೆ ಎಂದರೆ ಸರಿ. ನಮ್ಮ ಹೊಲದ ಸುತ್ತ ಮುತ್ತಲೂ ಸಹ ಬೇರೆಯವರಿಗೆ ಸೇರಿದ ಜಮೀನುಗಳು ಇವೆ ಎಂದರೆ ಸರಿ. ನಮ್ಮ ಮತ್ತು 1 ರಿಂದ 4 ನೇ ಆರೋಪಿತರ ನಡುವೆ ಸಿವಿಲ್ ವ್ಯಾಜ್ಯ ಇರುವುದರಿಂದ ನಮ್ಮಗಳ ನಡುವೆ ಮನಸ್ತಾಪ ಇದೆ ಎಂದರೆ ಸರಿ. ಆರೋಪಿ 5 ರಿಂದ 9 ರವರು ಆರೋಪಿ 1 ರಿಂದ 4 ರವರ ಪರವಾಗಿ ಮಾತನಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆದರೆ ಆರೋಪಿತರು ನಮಗೆ ಹೊಲ ಉಳುಮೆ ಮಾಡಲು ಬಿಡುತ್ತಿಲ್ಲ ಎಂದು ಸಾಕ್ಷಿ ಹೇಳಿರುತ್ತಾರೆ. ಮು ಮಾ 1 ಮತ್ತು 2 ನ್ನು ಸಾಮಾನ್ಯವಾಗಿ ಹೊಲದ ಕೆಲಸಗಳಿಗೆ ಉಪಯೋಗಿಸುತ್ತೇವೆ ಎಂದರೆ ಸರಿ. ಸದರಿ ವಸ್ತುಗಳು ಸಾಮಾನ್ಯವಾಗಿ ಎಲ್ಲಾ

ರೈತರ ಮನೆಗಳಲ್ಲೂ ಸಿಗುತ್ತವೆ ಎಂದರೆ ಸರಿಯಲ್ಲ. ಸಾಕ್ಷಿ ಮು ಮಾ 1 ಮತ್ತು 2 ನಮ್ಮವು ಎಂದು ಹೇಳಿರುತ್ತಾರೆ. ನಂತರ ಅವುಗಳು ಆರೋಪಿತರಿಗೆ ಸೇರಿರುತ್ತವೆ ಎಂದು ಪುನಃ ಹೇಳಿರುತ್ತಾರೆ. ಯಾವ ಕುಡುಗೋಲನ್ನು ಯಾರು ಹಿಡಿದು ಕೊಂಡು ಬಂದಿದ್ದರು ಎಂಬುದರ ಬಗ್ಗೆ ಪೋಲೀಸರು ನನ್ನನ್ನು ಠಾಣೆಯಲ್ಲಿ ವಿಚಾರಿಸಿದ್ದರು. ಮು ಮಾ 1 ರಿಂದ 3 ನ್ನು ಪೋಲೀಸರು ಎಲ್ಲಿಂದ ತಂದಿದ್ದರು ಎಂಬುದನ್ನು ಮತ್ತು ಯಾವಾಗ ತಂದಿದ್ದರು ಎಂಬುದನ್ನು ನಾನು ನೋಡಿಲ್ಲ. ರೈತರು ಸಾಮಾನ್ಯವಾಗಿ ಬಿಳಿ ಷರ್ಟ್ ಮತ್ತು ಬಿಳಿ ಪಂಚೆ ಧರಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮು ಮಾ 4 ಮತ್ತು 5 ನನ್ನ ಗಂಡನಿಗೆ ಸಂಬಂಧಪಟ್ಟಿದ್ದವು ಎಂಬುದರ ಬಗ್ಗೆ ನಾನು ವಿಶೇಷವಾದ ಗುರುತುಗಳನ್ನು ಪೋಲಿಸರ ಮುಂದೆ ಹೇಳಿದ್ದೆ. ನಿಪಿ-4 ಮತ್ತು 5 ಪೋಟೋಗಳಲ್ಲಿ ಮು ಮಾ 1 ರಿಂದ 3 ವಸ್ತುಗಳು ಕಾಣುತ್ತಿಲ್ಲ ಎಂದರೆ ಸರಿ. ನನಗೆ ಮತ್ತು ನನ್ನ ಗಂಡನಿಗೆ ಆರೋಪಿತರು ಹೊಡೆ ಬಡೆ ಮಾಡಿಲ್ಲ ಮತ್ತು ಜಾತಿ ನಿಂದನೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರು ನನಗೆ ಮತ್ತು ನನ್ನ ಗಂಡನಿಗೆ ಹೊಡೆದು ಬೈದು ಕೊಲೆ ಪ್ರಯತ್ನ ಮಾಡಿದ್ದರು ಎಂದು ಮತ್ತು ಕೊಲೆ ಬೆದರಿಕೆ ಹಾಕಿ ಜಾತಿ ನಿಂದನೆ ಮಾಡಿದ್ದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಆಸ್ತಿ ನಮ್ಮ ಕೈ ತಪ್ಪುತ್ತದೆ ಎಂಬ ಕಾರಣದಿಂದಾಗಿ ಅದನ್ನು ಹೇಗಾದರೂ ನಾವು ಉಳಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ಆರೋಪಿತರನ್ನು ಬೆದರಿಸುವ ಸಲುವಾಗಿ ನಾನು ಮತ್ತು ನನ್ನ ಗಂಡ ಸೇರಿಕೊಂಡು ಆರೋಪಿತರ ವಿರುದ್ಧ ಸುಳ್ಳು ಕೇಸು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**